*

**ಓಎಸ್ ನಂಃ 10/2009**
**ಡಿಡಬ್ಲೂಃ 4**

**<u>ಸಾಕ್ಷಿಗೆ ದಿನಾಂಕ 05-03-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್.ಎ.ಕೆ. ವಕೀಲರಿಂದ</u>

ನನ್ನ ಪ್ರಕಾರ ಶ್ಯಾಮ್ ಸುಂದರ್ ರವರ ಕುಟುಂಬದಲ್ಲಿ ಕಳೆದ 10-15 ವರ್ಷದ ಹಿಂದೆ ಪಾಲು ವಿಭಾಗ ಆಗಿರುತ್ತದೆ. ನಾನು ಕುಂಬಾರ ಹಳ್ಳಿಯಲ್ಲಲಿ ಗದ್ದೆ ಹೊಂದಿರುತ್ತೇನೆ. ನಿಮ್ಮ ಕುಟುಂಬದ ಗದ್ದೆ ರೈಲ್ವೇ ಅಗಲೀಕರಣ ಸಮಯದಲ್ಲಿ ಹೋಗಿದೆ ಎಂದರೆ ಸರಿ. ರೈಲ್ವೇ ಅಗಲೀಕರಣ ಆದ ನಂತರ ರೈಲ್ವೇ ಹಳಿ ಯಾದಗಿರಿ ಚಿತ್ತಾಪುರ ರಸ್ತೆಗೆ ಎಷ್ಟು ದೂರದಲ್ಲಿ ಇದೆ ಎಂದರೆ ಸಾಕ್ಷಿ 10ಫೀಟ್ ದೂರದಲ್ಲಿದೆ ಎಂದು ನುಡಿಯುತ್ತಾರೆ. ಯಾದಗಿರಿ ಚಿತ್ತಾಪುರ ರಸ್ತೆಯನ್ನು 10 ವರ್ಷದ ಹಿಂದೆ ಅಗಲೀಕರಣ ಮಾಡಲಾಗಿದೆ ಎಂದರೆ ಸರಿ. ಶ್ಯಾಮ್ ಸುಂದರ್ ರವರ ಕುಟುಂಬದಲ್ಲಿ ಪಾಲು ವಿಭಾಗ ನನ್ನ ಸಮಕ್ಷಮ ಆಗಿರುವುದಿಲ್ಲ. ನನಗೆ ಪ್ರತಿವಾದಿ ಹೇಳಿದ ಕಾರಣ ಆತನಿಗೆ ಸರಕಾರದಿಂದ ರಸ್ತೆ ಅಗಲೀಕರಣಕ್ಕೆ ಹಣ ಬಂದ ಬಗ್ಗೆ ಮಾಹಿತಿ ಗೊತ್ತಾಯಿತು. ನನಗೆ ನಿಖರವಾಗಿ ಎಷ್ಟು ಹಣ ಬಂದಿದೆ ಎಂದು ಗೊತ್ತಿಲ್ಲ. ನನಗೆ ದಾವಾ ಆಸ್ತಿಯ ಕಂದಾಯ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲ. ಶ್ಯಾಮ್ ಸುಂದರ್ ರವರು ನನ್ನ ಪ್ರಕಾರ ಭೀಮರಾಯ ಅವರಿಗೆ ಯಾವುದೇ ಬೆದರಿಕೆ ಹಾಕಿಲ್ಲ ಮತ್ತು ಶ್ಯಾಮ್ ಸುಂದರ್ ರವರು ಆದ ಕಾರಣ ಈ ದಾವೆಯನ್ನು ಸಲ್ಲಿಸಿದ್ದಾರೆಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ. ನಿಮಗೆ ಯಾವುದೇ ವಿಷಯಗಳ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.

*

**ಓಎಸ್ ನಂಃ 10/2009**

**ಡಿಡಬ್ಲೂಃ 3**

**<u>ಸಾಕ್ಷಿಗೆ ದಿನಾಂಕ 05-03-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್.ಎ.ಕೆ. ವಕೀಲರಿಂದ</u>

ದಾವಾ ಆಸ್ತಿಯಲ್ಲಿ ಶ್ಯಾಮ್ ಸುಂದರ್ ರವರ ಅಣ್ಣ ತಮ್ಮಂದಿರಿಗೆ ಪಾಲು ಇದೆ ಎಂದರೆ ಸರಿ. ದಾವಾ ಆಸ್ತಿಯ ಪಕ್ಕದಲ್ಲಿ ನಿಮಗೆ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ನಾನು ನಿಪಿ-1ಕ್ಕೆ ಸಹಿ ಮಾಡಿಲ್ಲ. ಶ್ಯಾಮ್ ಸುಂದರ್ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾನೆಂದು ನಿಮಗೆ ಹೇಗೆ ಗೊತ್ತಾಯಿತು ಎಂದು ಕೇಳಿದಾಗ ಸಾಕ್ಷಿ ಅಲ್ಲಸಲ್ಲದ ಮಾತನ್ನು ಹೇಳಿ ನನಗೆ ಗೊತ್ತಿದೆ ಎಂದು ಹೇಳಿ ನಿಮಗೆ ಹೇಗೆ ಗೊತ್ತಾಯಿತು ಎಂದು ಮೇಲಿಂದ ಮೇಲೆ ಕೇಳಿದರೂ ಸಹ ಸಾಕ್ಷಿ ಅಲ್ಲಸಲ್ಲದ ಉತ್ತರವನ್ನು ನ್ಯಾಯಾಲಯದಲ್ಲಿ ನೀಡಿರುತ್ತಾರೆ. ನೀವು ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಕಳೆದ 7-8 ವರ್ಷಗಳ ಹಿಂದೆ ಯಾದಗಿರಿ - ಚಿತ್ತಾಪುರ ರಸ್ತೆಯನ್ನು ಅಗಲ ಮಾಡಿದ್ದಾರೆ ಎಂದರೆ ಸರಿ. ಆ ಮೊದಲು ಯಾವುದೇ ಅಗಲೀಕರಣ ಮಾಡಿರಲಿಲ್ಲ ಎಂದರೆ ಸರಿ. ಯಾದಗಿರಿ - ಚಿತ್ತಾಪುರ ರಸ್ತೆ ಕಳೆದ 80 ವರ್ಷಗಳಿಂದ ಇದೆ ಎಂದರೆ ಸರಿ. ನನಗೆ ಪ್ರತಿವಾದಿ ಹೇಳಿದ ಕಾರಣ ಆತನಿಗೆ ಸರಕಾರದಿಂದ ರಸ್ತೆ ಅಗಲೀಕರಣಕ್ಕೆ ಹಣ ಬಂದ ಬಗ್ಗೆ ಮಾಹಿತಿ ಗೊತ್ತಾಯಿತು. ನನಗೆ ನಿಖರವಾಗಿ ಎಷ್ಟು ಹಣ ಬಂದಿದೆ ಎಂದು ಗೊತ್ತಿಲ್ಲ. ನನಗೆ ದಾವಾ ಆಸ್ತಿಯ ಕಂದಾಯ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲ. ನಿಮಗೆ ಯಾವುದೇ ವಿಷಯಗಳ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,

ಚಿತ್ತಾಪೂರ.

*

**ಓಎಸ್ ನಂಃ 10/2009**
**ಡಿಡಬ್ಲೂಃ 2**

**<u>ಸಾಕ್ಷಿಗೆ ದಿನಾಂಕ 05-03-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್.ಎ.ಕೆ. ವಕೀಲರಿಂದ</u>

ಶ್ಯಾಮ್ ಸುಂದರ್ ರವರಿಗೆ 3 ಜನ ಅಣ್ಣತಮ್ಮಂದಿರು ಎಂದರೆ ಸರಿ. ನನಗೆ ಕಳೆದ 40 ವರ್ಷಗಳಿಂದ ಪ್ರತಿವಾದಿಯ ಪರಿಚಯ ಇದೆ. ಬದ್ದುನಾಯಕ ತಾಂಡಾದಲ್ಲಿ ನಮ್ಮ ಕುಟುಂಬ ವಾಸವಾಗಿತ್ತು ಈಗಲೂ ಸಹ ನಾನು ಅಲ್ಲಿ ವಾಸವಾಗಿರುತ್ತೇನೆ. ನಾನು ನಾಲ್ವಾರ್ ಸ್ಟೇಷನ್ ನಲ್ಲಿ ನಾನು ಕಳೆದ 10 ವರ್ಷಗಳ ಹಿಂದೆ ಮನೆ ಕಟ್ಟಿರುತ್ತೇನೆ. ಬದ್ದುನಾಯಕ ತಾಂಡಾದಲ್ಲಿ ನನಗೆ ಯಾವುದೇ ಜಮೀನು ಇಲ್ಲ ಮತ್ತು ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನ್ನ ಜಮೀನು ಇಲ್ಲ. ಸಾಕ್ಷಿ ಮುಂದುವರಿದು ನನ್ನ ಹೊಲ ಬದ್ದುನಾಯಕ ತಾಂಡಾದ ಪಕ್ಕದಲ್ಲಿದೆ ಎಂದು ನುಡಿಯುತ್ತಾರೆ. ನಿಮಗೆ ಶ್ಯಾಮ್ ಸುಂದರ್ ಕುಟುಂಬದವರಿಗೆ ಹೇಗೆ ಪರಿಚಯ ಎಂದು ಕೇಳಿದಾಗ ಸಾಕ್ಷಿ ಸುಮಾರು 30-35 ವರ್ಷಗಳ ಹಿಂದೆ ಶ್ಯಾಮ್ ಸುಂದರ್ ಇವರು ನನಗೆ ಒಂದು ಸ್ಟ್ಯಾಂಪ್ ಕಾಗದದ ಮೇಲೆ ಸಹಿ ಮಾಡಲು ಕರೆದಾಗ ನನ್ನ ಪರಿಚಯ ಆಗಿರುತ್ತದೆ.

ನಾನು ಸಹಿ ಮಾಡಿದ ಸ್ಟ್ಯಾಂಪ್ ಕಾಗದದ ಮೇಲೆ ಏನು ಬರೆಯಲಾಗಿತ್ತು ಎಂದು ನನಗೆ ಮಾಹಿತಿ ಇಲ್ಲ. ಸದರಿ ಕಾಗದವನ್ನು ಯಾವ ವರ್ಷದಲ್ಲಿ ಬರೆಯಲಾಗಿತ್ತು ಮತ್ತು ಅದರಲ್ಲಿ ಯಾವ ಸರ್ವೆ ನಂಬರ್ ನಮೂದು ಮಾಡಲಾಗಿತ್ತು ಎಂದು ನನಗೆ ಮಾಹಿತಿ ಇಲ್ಲ. ನಿಪಿ-1 ಸ್ಟ್ಯಾಂಪ್ ಕಾಗದದ ಮೇಲೆ ಬೇರೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಮಾಹಿತಿ ಇಲ್ಲ ಆದರೆ 5-6 ಜನ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ಸ್ಟ್ಯಾಂಪ್ ಕಾಗದವನ್ನು ಕುಂಟ ಮಾಸ್ಟರ್ ಬರೆದಿರುತ್ತಾನೆ. ನನಗೆ ನಿಪಿ-1ರ ಮೇಲೆ ಸಹಿ ಮಾಡಿದ್ದಾರೆನ್ನುವ ವ್ಯಕ್ತಿಗಳ ಹೆಸರು ಗೊತ್ತಿಲ್ಲ. ನಿಪಿ-1ರ ಪ್ರಕಾರ ರಸ್ತೆಗೆ ಹತ್ತಿಕೊಂಡ 20 ಗುಂಟೆ ಕ್ಷೇತ್ರವನ್ನು ಕುಂಟ ಮಾಸ್ಟರ್ ಬರೆದು ಕೊಟ್ಟಿರುತ್ತಾನೆ. ನಿಪಿ-1 ಆದ ನಂತರ ಪ್ರತಿವಾದಿ ಅದನ್ನು ನೋಂದಾಯಿಸಿಕೊಂಡಿಲ್ಲ. ನಿಪಿ-1 ಬರೆದುಕೊಡುವ ಸಮಯದಲ್ಲಿ ಶ್ಯಾಮ್ ಸುಂದರ್ ಇವರ ಸಹೋದರರಾದ ಆನಂದ್ ಮತ್ತು ಕೃಷ್ಣಪ್ಪ ಅಲ್ಲಿದ್ದರೋ ಇಲ್ಲವೋ ಎಂದು ಈಗ ನೆನಪಿಲ್ಲ. ನಿಪಿ-1ಕ್ಕೆ ಆನಂದ್ ಮತ್ತು ಕೃಷ್ಣಪ್ಪ ಸಹಿ ಮಾಡಿದ್ದರೋ ಇಲ್ಲವೋ ಎಂದು

ನನಗೆ ಮಾಹಿತಿ ಇಲ್ಲ.  ಶ್ಯಾಮ್ ಸುಂದರ್ ಇವರ  ಕುಟುಂಬದಲ್ಲಿ ಪಾಲು ವಿಭಾಗ ಆಗಿದೆ ಎಂದು ನಿಮ್ಮ ಪ್ರಮಾಣಪತ್ರದಲ್ಲಿ ನಮೂದು ಮಾಡಿದ್ದೀರಿ ಸದರಿ ಪಾಲು ವಿಭಾಗ  ನಿಮ್ಮ ಸಮಕ್ಷಮ ಆಗಿದೆಯಾ ಎಂದರೆ ಸಾಕ್ಷಿ ನಾನು ಬೇರೆಯವರಿಂದ ಕೇಳಿ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ.  ನನಗೆ ಯಾರು ತಿಳಿಸಿದರು ಎಂದು ಈಗ ನನಗೆ ಹೇಳಲು ಬರುವುದಿಲ್ಲ.  ಶ್ಯಾಮ್ ಸುಂದರ್ ಇವರ  ಕುಟುಂಬದಲ್ಲಿ ಯಾವುದೇ  ಪಾಲು ವಿಭಾಗ ಆಗಿಲ್ಲ ಆದ ಕಾರಣ ನೀವು ಈಗ ಪ್ರತಿವಾದಿಗೆ  ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಶ್ಯಾಮ್ ಸುಂದರ್ ಇವರ  ಕುಟುಂಬದಲ್ಲಿರುವ ಎಲ್ಲಾ ಆಸ್ತಿಗಳಲ್ಲಿ ಈಗಲೂ ಸಹ ಅವರ ಸಹೋದರ ಮತ್ತು ಅವರ ಹೆಸರು ಇದೆ ಎಂದರೆ ನನಗೆ ಗೊತ್ತಿಲ್ಲ.  ನಿಮ್ಮ ಪ್ರಮಾಣ ಪತ್ರದಲ್ಲಿ ನಿಪಿ-1 ಸ್ಟ್ಯಾಂಪನ್ನು 30 ರಿಂದ 35 ವರ್ಷಗಳ ಹಿಂದೆ ಮಾಡಲಾಗಿದೆ ಮತ್ತು ಶ್ಯಾಮ್ ಸುಂದರ್ ಅವರ ಕುಟುಂಬದಲ್ಲಿ ಪಾಲು ವಿಭಾಗ 20 ರಿಂದ 25 ವರ್ಷಗಳ ಹಿಂದೆ ಮಾಡಲಾಗಿದೆ ಎಂದು ನಮೂದು ಮಾಡಿದ್ದೀರಿ ಹಾಗಾದರೆ ನಿಪಿ-1 ಸ್ಟ್ಯಾಂಪನ್ನು ಮಾಡಿದ ನಂತರ ಶ್ಯಾಮ್ ಸುಂದರ್ ಕುಟುಂಬದಲ್ಲಿ ಪಾಲು ವಿಭಾಗ ಆಗಿದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.  ಪ್ರತಿವಾದಿ ನಿಪಿ-1 ಸ್ಟ್ಯಾಂಪ್ ಕಾಗದವನ್ನು ತಯಾರಿಸಿಕೊಂಡು ಬಂದು ನಿಮ್ಮ ಹೆಬ್ಬೆಟ್ಟಿನ ಗುರುತನ್ನು ಪಡೆದಿದ್ದಾನೆ ಎಂದರೆ ಸಾಕ್ಷಿ ಆಗ ಅಲ್ಲಿ ಜನ ಸೇರಿದ್ದರು ಎಂದು ನುಡಿಯುತ್ತಾರೆ. ಉಳಿದ ನಿಪಿ-1ರಲ್ಲಿ ಸಹಿ ಮಾಡಿದ ವ್ಯಕ್ತಿಗಳು ತೀರಿಕೊಂಡ ಕಾರಣ ನೀವು ಈಗ  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.  ದಾವಾ ಆಸ್ತಿಯ ಪಕ್ಕದಲ್ಲಿದ್ದ ರಸ್ತೆಯು ಕಳೆದ 4-5 ವರ್ಷಗಳ ಹಿಂದೆ 2 ಬಾರಿ ಅಗಲ ಮಾಡಲಾಗಿರುತ್ತದೆ.  ಸರಕಾರದವರು ಯಾವುದೇ ರಸ್ತೆಯನ್ನು ಅಗಲ ಮಾಡಬೇಕಾದರೆ ಸದರಿ ಅಕ್ಕಪಕ್ಕದ ಆಸ್ತಿಗಳನ್ನು ಮಾಲಕುದಾರರಿಂದ ಪಡೆಯಬೇಕಾಗುತ್ತದೆ ಎಂದರೆ ಸರಿ. ಸರಕಾರದವರು ದಾವಾ ಆಸ್ತಿಯಲ್ಲಿ ಯಾವುದೇ ಜಾಗವನ್ನು ಪಡೆದಿಲ್ಲ ಎಂದರೆ ಸರಿಯಲ್ಲ.  ನನಗೆ ಸರಕಾರದವರು ದಾವಾ ಆಸ್ತಿಯಲ್ಲಿ ರಸ್ತೆಗಾಗಿ ಜಾಗ ಪಡೆದ ಬಗ್ಗೆ ಯಾವುದೇ ಮಾಹಿತಿ ಇಲ್ಲ.  ನನಗೆ ಪ್ರತಿವಾದಿ ಹೇಳಿದ ಕಾರಣ ಆತನಿಗೆ ಸರಕಾರದಿಂದ ರಸ್ತೆ ಅಗಲೀಕರಣಕ್ಕೆ ಹಣ ಬಂದ ಬಗ್ಗೆ ಮಾಹಿತಿ ಗೊತ್ತಾಯಿತು.  ನನಗೆ ನಿಖರವಾಗಿ ಎಷ್ಟು ಹಣ ಬಂದಿದೆ ಎಂದು ಗೊತ್ತಿಲ್ಲ.  ನನಗೆ ದಾವಾ ಆಸ್ತಿಯ ಕಂದಾಯ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲ.  ನಿಮಗೆ

ಯಾವುದೇ ವಿಷಯಗಳ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.